PRAJA VANI (KANNADA DAILY)

Date : January 5, 2013 Page : 2

Edition: Mysore Language: Kannada

ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ವೆಂಕಟೇಶ್ವರನ್ ಸಲಹೆ

# ‘ಹೃದಯದ ಮಾತು ಕೇಳಿ ಯಶಸ್ಸು ಗಳಿಸಿ’

ಪ್ರಜಾವಾಣಿ ವಾರ್ತೆ

ಮೈಸೂರು: ವೈರುಧ್ಯ ಮತ್ತು ದ್ವಂದ್ವಗಳ ಜಗತ್ತಿನಲ್ಲಿ ನಾವು ಇವತ್ತು ಬದುಕುತ್ತಿದ್ದೇವೆ. ಮೆದುಳು ಮತ್ತು ಹೃದಯದ ಚಿಂತನೆಗಳ ನಡುವೆ ದ್ವಂದ್ವ ಉದ್ಭವಿಸಿದಾಗ ಹೃದಯದ ಮಾತು ಕೇಳಿ. ಯಶಸ್ಸು ನಿಮ್ಮದಾಗುತ್ತದೆ’ ಎಂದು ಕಸ್ಟಮರ್ಸ್ ಸರ್ವಿಸ್ ಎಕ್ಸಲೆನ್ಸ್ ಫೌಂಡೇಷನ್ ಅಧ್ಯಕ್ಷ ರಮೇಶ್ ವೆಂಕಟೇಶ್ವರನ್ ಶುಕ್ರವಾರ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಹಾರ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯಲ್ಲಿ (ಎಸ್‌ಡಿಎಂಐಎಂಡಿ) ಶುಕ್ರವಾರ ನಾಯಕತ್ವ ಮತ್ತು ಸವಾಲುಗಳ ಕುರಿತು ಅಂತರರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟನೆ ಸಮಾರಂಭದಲ್ಲಿ ವಿಷಯ ಮಂಡಿಸಿ ಅವರು ಮಾತನಾಡಿದರು.

‘ತಂತ್ರಜ್ಞಾನದ ಭರಾಟೆಯಿಂದಾಗಿ ನಾವು ಬಹಳ ಸಂವಹನಶೀಲರಾಗಿದ್ದೇವೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಹೈಟೆಕ್ ಆಗುತ್ತಿರುವ ನಾವು ಪರಸ್ಪರ ಸ್ಪರ್ಶ ಸಂವಹನ ಕಳೆದುಕೊಳ್ಳುತ್ತಿದ್ದೇವೆ. ಉದ್ಯಮ ಕ್ಷೇತ್ರ, ಮಾರುಕಟ್ಟೆಯಲ್ಲಿ ಯಶಸ್ಸು ಗಳಿಸಲು ಮುಖಾಮುಖಿ ಸಂವಹನ ಮತ್ತು ಪರಸ್ಪರ ಮಧುರ ಬಾಂಧವ್ಯಗಳಿಂದ ಸಾಧ್ಯವಿದೆ. ಆದರೆ ಇವತ್ತು ಕೈಯಲ್ಲಿ ಸೆಲ್‌ಫೋನ್ ಇದೆ. ಎಸ್‌ಎಂಎಸ್ ಮತ್ತು ಒಂದೆರಡು ಮಾತುಗಳ ಮೂಲಕ ನಮ್ಮ ಸಂವಹನಗಳು ನಡೆಯುತ್ತಿವೆ. ಇದರಿಂದ ವೃತ್ತಿ ಬಾಂಧವ್ಯ ಬಿಡಿ, ಕೌಟುಂಬಿಕ ಹೊಂದಾಣಿಕೆಯೂ ಮರೆಯಾಗುತ್ತಿದೆ. ಹೋಟೆಲ್‌ಗಳಲ್ಲಿ ಕುಳಿತ ಹುಡುಗ–ಹುಡುಗಿಯರು ಪರಸ್ಪರ ಮಾತನಾಡುವುದೇ ಕಮ್ಮಿ, ತಮ್ಮ ಮೊಬೈಲ್‌ಗಳಲ್ಲಿ ಎಸ್‌ಎಂಎಸ್ ಚಾಟಿಂಗ್‌ನಲ್ಲಿ ನಿರತರಾಗಿರುತ್ತಾರೆ. ಇದರಿಂದ ಹೋಟೆಲ್‌ನವರು ಶ್ರೀಮಂತರಾಗುತ್ತಾರೆಯೇ ಹೊರತು ಇವರಿಗೆ ಏನು ಲಾಭ’ ಎಂದು ಹಾಸ್ಯಮಿಶ್ರಿತ ಧಾಟಿಯಲ್ಲಿ ಹೇಳಿದರು.

‘ಮಾರುಕಟ್ಟೆಯಲ್ಲಿ ನಾಯಕತ್ವ ವಹಿಸುವ ವ್ಯವಸ್ಥಾಪಕರಿಗೆ ಇವತ್ತು ಹಲವು ಪ್ರಬಲ ಸವಾಲುಗಳಿವೆ. ಅದರಲ್ಲಿ ಒಂದು ಸಂವಹನದ ಕೊರತೆ. ಸಫಲತೆ ಗಳಿಸಲು ವಾಮಮಾರ್ಗಗಳನ್ನು ಹಿಡಿಯುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಕಾರ್ಪೋರೇಟ್, ಸಾಮಾಜಿಕ, ರಾಜಕೀಯ ಮತ್ತು ಕಾರ್ಯಾಂಗಗಳಲ್ಲಿ ಇವತ್ತು ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡವರೆಲ್ಲರೂ ಮಹತ್ವಾಕಾಂಕ್ಷೆಯೊಂದಿಗೇ ವೃತ್ತಿ ಆರಂಭಿಸಿದವರು. ಆದರೆ ಶೀಘ್ರ ಯಶಸ್ಸಿನ ಬೆನ್ನು ಹತ್ತಿ ಯಾವುದೋ ಒಂದು ಹಂತದಲ್ಲಿ ದಾರಿ ತಪ್ಪಿದವರು. ಆದ್ದರಿಂದ ನಮ್ಮ ಸಂಪ್ರದಾಯ, ಪರಂಪರೆ ಮತ್ತು ಇತಿಹಾಸಗಳನ್ನು ಅರಿತುಕೊಳ್ಳಬೇಕು. ನಿರ್ವಹಣಾ ಶಾಸ್ತ್ರವೆಂದರೇ ಇತಿಹಾಸವನ್ನು ಅರಿತು, ಭೂತ ಹಾಗೂ ಭವಿಷ್ಯತ್ತನ್ನು ಸಮತೋಲನದಿಂದ ಬೆಸೆಯಬೇಕು’ ಎಂದು ಅಭಿಪ್ರಾಯಪಟ್ಟರು.

‘ಸ್ಥಳೀಯ ಸಂಪನ್ಮೂಲವನ್ನು ಜಾಗತಿಕ ಮಟ್ಟದಲ್ಲಿ ಬಳಸಿಕೊಳ್ಳುವ ಮತ್ತು ಜಾಗತಿಕ ಮಟ್ಟದ ಜ್ಞಾನವನ್ನು ಸ್ಥಳೀಯ ಅಭಿವೃದ್ಧಿಗೆ ವಿನಿಯೋಗಿಸುವಲ್ಲಿ ನಾವು ಇನ್ನೂ ಪ್ರಬುದ್ಧರಾಗಿಲ್ಲ. ನಾವೆಲ್ಲ ಕೇವಲ ಸಂಖ್ಯೆಗಳ ಹಿಂದೆ ಓಡುತ್ತಿದ್ದೇವೆಯೇ ಹೊರತು ಗುಣಮಟ್ಟದ ಹಿಂದೆ ಅಲ್ಲ. ಆ್ಯಪಲ್ ಟೆಕ್ನಾಲಜೀಸ್‌ನ ಸ್ಟೀವ್ ಜಾಬ್ ಎಲ್ಲ ಉದ್ಯಮದ ಎಲ್ಲ ರಂಗಗಳಲ್ಲಿಯೂ ಯಶಸ್ಸು ಸಾಧಿಸಿ ತೋರಿದ್ದರು. ಆದರೂ ಅವರು ಸಮಾಜ ಕಲ್ಯಾಣದ ಕೆಲಸದಲ್ಲಿ ತೊಡಗಿಕೊಳ್ಳಲಿಲ್ಲ ಎಂಬ ಆರೋಪ ಇದೆ. ಆದರೆ ಅವರು ತಯಾರಿಸಿದ ಐಫೋನ್, ಸೆಲ್‌ಫೋನ್, ಐಪಾಡ್‌ಗಳ ಮೂಲಕ ದೇಶದ ಜಿಡಿಪಿಯಲ್ಲಿ ಶೇಕಡಾ 1–2 ರಷ್ಟು ಅಭಿವೃದ್ಧಿಯಾದರೆ ಅದು ಸಮಾಜಕ್ಕೆ ನೀಡಿದ ಕೊಡುಗೆಯಲ್ಲವೇ’ ಎಂದು ಪ್ರಶ್ನಿಸಿದರು.

‘ಇಂತಹ ಹಲವು ದ್ವಂದ್ವಗಳ ನಡುವೆಯೇ ನಾವು ಉತ್ತಮ ನಿರ್ಧಾರ ತೆಗೆದುಕೊಂಡು ಯಶಸ್ಸು ಗಳಿಸಬೇಕಾಗಿದೆ. ಇಂತಹ ಗೊಂದಲಗಳಿಂದಾಗಿಯೇ ಇವತ್ತು ಯುವಜನರಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಒತ್ತಡ ಹೆಚ್ಚುತ್ತಿರುವ ಈ ದಿನಗಳಲ್ಲಿ ಒತ್ತಡ ನಿವಾರಕ ಔಷಧಿಗಳ ಮಾರಾಟದ ಭರಾಟೆ ಜೋರಾಗಿದೆ. ಇದು ತಪ್ಪಬೇಕಾದರೆ ಹೃದಯದ ಮಾತು ಕೇಳಿ, ಕೌಟುಂಬಿಕ ಮತ್ತು ಸಾಮಾಜಿಕ ಸಂವಹನಕ್ಕೆ ಒತ್ತು ಕೊಡಿ’ ಎಂದು ವೆಂಕಟೇಶ್ವರನ್ ಸಲಹೆ ನೀಡಿದರು.

ಟೆಕ್ಸಾಸ್ ವಿಶ್ವವಿದ್ಯಾಲಯ ಮೇಸ್ ಬಿಸಿನೆಸ್ ಸ್ಕೂಲ್‌ನ 24 ವಿದ್ಯಾರ್ಥಿಗಳೂ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ನಾಟಿಂಗ್‌ಹ್ಯಾಂ ವಿಶ್ವವಿದ್ಯಾಲಯ ಬಿಸಿನೆಸ್ ಸ್ಕೂಲ್‌ನ ಸಹ ಪ್ರಾಧ್ಯಾಪಕ ಪ್ರೊ. ಅವ್ವಾರಿ ವಿ. ಮೋಹನ್, ಹೈದರಾಬಾದಿನ ಪೋಲರೀಸ್ ಸಾಫ್ಟ್‌ವೇರ್ ಲ್ಯಾಬ್ ಲಿಮಿಟೆಡ್ ಪ್ರಾಚಾರ್ಯ ಸಲಹೆಗಾರ ವಿನಯಕುಮಾರ್, ಟರುಮಾ ಪೆನ್‌ಪೋಲ್ ವ್ಯವಸ್ಥಾಪಕ ನಿರ್ದೇಶಕ ಸಿ. ಬಾಲಗೋಪಾಲ್, ಡಾ. ಜೂಲಿಯನ್ ಗ್ಯಾಸ್ಪರ್, ಮತ್ತಿತರರು ಹಾಜರಿದ್ದರು.



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯವಸ್ಥಾಪನ ನಿರ್ವಹಣೆ ಅಭಿವೃದ್ಧಿ ಸಂಸ್ಥೆಯಲ್ಲಿ (ಎಸ್‌ಡಿಎಂಐಎಂಡಿ) ಶುಕ್ರವಾರ ನಡೆದ ನಾಯಕತ್ವ ಮತ್ತು ಸವಾಲುಗಳು ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕಸ್ಟಮರ್ಸ್ ಸರ್ವಿಸ್ ಎಕ್ಸಲೆನ್ಸ್ ಫೌಂಡೇಷನ್ ಅಧ್ಯಕ್ಷ ರಮೇಶ್ ವೆಂಕಟೇಶ್ವರನ್, ಉಪಾಧ್ಯಕ್ಷ ವಿನಯಕುಮಾರ್, ಪ್ರೊ. ಅವ್ವಾರಿ ವಿ. ಮೋಹನ್, ಸಿ. ಬಾಲಗೋಪಾಲ್ ಹಾಜರಿದ್ದರು.

## ‘ಪರಿಹಾರ ನೀಡುವಲ್ಲಿ ಮುಂದೆ’

ಇವತ್ತಿನ ವ್ಯಾಪಾರ ಕ್ಷೇತ್ರದಲ್ಲಿ ವ್ಯವಹಾರ ನಿರ್ವಹಣಾ ಸಂಸ್ಥೆಗಳು ಸಮಸ್ಯೆಗಳ ಸೃಷ್ಟಿಕರ್ತರು ಎಂಬ ಆರೋಪಕ್ಕೆ ಒಳಗಾಗಿವೆ. ಆದರೆ ಇವತ್ತು ವಿಶಾಲ ವ್ಯಾಪ್ತಿಯಲ್ಲಿ ಬೆಳೆಯುತ್ತಿರುವ ಔದ್ಯಮಿಕ ಕ್ಷೇತ್ರದಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ನೀಡುವುದರಲ್ಲಿ ವ್ಯವಹಾರ ನಿರ್ವಹಣಾ ಸಂಸ್ಥೆಗಳು ಮುಂಚೂಣಿಯಲ್ಲಿವೆ ಎಂದು ನಾಟಿಂಗ್‌ಹ್ಯಾಂ ವಿಶ್ವವಿದ್ಯಾಲಯದ ಬಿಸಿನೆಸ್ ಸ್ಕೂಲ್‌ಸಹ ಪ್ರಾಧ್ಯಾಪಕ ಪ್ರೊ. ಅವ್ವಾರಿ ಮೋಹನ್ ಹೇಳಿದರು.

‘ವಿಶ್ವಮಟ್ಟದಲ್ಲಿ ಇವತ್ತು ಬಂಡವಾಳ ಹೂಡಿಕೆ ಮಾಡಲು ಜನಸಮೂಹದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಸುಸ್ಥಿರ ಪದ್ಧತಿಗಳ ಮೂಲಕ ವ್ಯವಹಾರಶಾಸ್ತ್ರ ನಿರ್ವಹಣೆ ಮಾಡುವುದರಿಂದ ಹೆಚ್ಚಿನ ಲಾಭ ಗಳಿಸುವುದು ಸಾಧ್ಯ’ ಎಂದು ಹೇಳಿದರು.

*International Symposium held on January 4, 2012, SDMIMD, Mysore*